**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.31/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಸೋಮನಗೌಡ ಮನ್ನಂಗಿ | ಸಿಡಬ್ಲ್ಯೂ | 5 |
| ತಂದೆ ಹೆಸರು | ರೇವನಗೌಡ | ಪಿಡಬ್ಲ್ಯೂ | 6 |
| ವಯಸ್ಸು | 35 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಜಲ್ಲಾಪುರ | | |

ದಿಃ **07.07.2025** ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.

**1).** ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ತನ್ನದೇ ಎಂದು ಒಪ್ಪಿದ್ದರಿಂದ ಸದರಿ ದಾಖಲಾತಿಯು ವಾಹನ ಜಪ್ತು ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-6(ಬಿ) ಎಂದು ಗುರುತಿಸಲಾಯಿತು. ನಿ.ಪಿ-7 ಪೋಟೊ ಸಾಕ್ಷಿಗೆ ತೋರಿಸಲಾಗಿಅದರಲ್ಲಿ ತಾನು ಇರುವದಾಗಿ ಒಪ್ಪಿದ್ದರಿಂದ ಸದರಿ ಪೋಟೋ ಈಗಾಗಲೇ ನಿ.ಪಿ-7 ಎಂದು ಗುರುತಿಸಲಾಗಿರುತ್ತದೆ. ನಿ.ಪಿ-6 ವಾಹನ ಜಪ್ತು ಪಂಚನಾಮೆಯಲ್ಲಿ ಏನೆಲ್ಲ ಸಂಗತಿ ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ಈಗ ಒಂದುವರೆ ವರ್ಷದ ಹಿಂದೆ ದೇವಗಿರಿ ರಸ್ತೆಯಲ್ಲಿ ದೇವಗಿರಿ ಬ್ರಿಡ್ಜ ಹತ್ತಿರ ನಾನು ಚಹಾ ಕುಡಿಯುವಾಗ ಪೊಲೀಸರು ನನ್ನನ್ನು ಕರೆಯಿಸಿ ನನ್ನ ಸಹಿ ಪಡೆದಿರುತ್ತಾರೆ, ಆದ್ದರಿಂದ ಅದರಲ್ಲಿ ಬರೆದಿರುವ ವಿಷಯಗಳು ಗೊತ್ತಿರುವದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಅನುಮತಿ ನೀಡಲಾಯಿತು).

ಪಾಟೀ ಸವಾಲುಃ ಪ್ರಭಾರ ಮಾನ್ಯ ಹಿರಿಯ ಸರ್ಕಾರಿ ಅಭಿಯೋಜಕರಿಂದಃ

**2)** ದಿನಾಂಕಃ 18.09.2022 ರಂದು ನನ್ನನ್ನು ಮತ್ತು ಚಾ.ಸಾ-4 ಇಬ್ಬರನ್ನೂ ಸಹ ಪೊಲೀಸರು ಪೊಲೀಸ ಠಾಣೆಗೆ ಕರೆಯಿಸಿ ಪೊಲೀಸ ಠಾಣೆಯಲ್ಲಿ ನಿಂತಿದ್ದ ವಾಹನ ಸಂಖ್ಯೆಃ ಕೆಎ-27/ಎಕ್ಸ-6757 ಈ ವಾಹನವನ್ನು ತೋರಿಸಿ ನಂತರ

ಪೊಲೀಸ ಠಾಣೆಯಲ್ಲಿ ನಮ್ಮ ಸಮಕ್ಷಮ ವಾಹನ ಜಪ್ತು ಪಂಚನಾಮೆಯನ್ನು ಬೆಳಗಿನ 11-15 ರಿಂದ 12-00 ಘಂಟೆಯವರೆಗೆ ಬರೆದಿರುತ್ತಾರೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ.ಎಂ.ಸಿ.ಹೆಚ್ ವಕೀಲರಿಂದಃ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.